**Code No. 31 Y**

ನೋಂದಣಿ ಸಂಖ್ಯೆ
*Register Number*

| |
|---|
| |

# ಮುದ್ರಣ ಪರೀಕ್ಷೆ
# PRINTING EXAMINATION
# ಕರಡು ಪ್ರತಿ ತಿದ್ದುವ ಕೆಲಸ — ಪ್ರೌಢ ದರ್ಜೆ
## ಪತ್ರಿಕೆ – II (ಪ್ರಾಯೋಗಿಕ)
# PROOF-READER'S WORK — SENIOR GRADE
## Paper – II ( Practical )

( Kannada & English Versions )

ಜನವರಿ, 2018 ] [ ಸಮಯ : 3 ಗಂಟೆಗಳು

[ ಗರಿಷ್ಠಾಂಕ : 40

***ಸೂಚನೆಗಳು :*** i) ನಿಮಗೆ ನೀಡಿರುವ ಪ್ರಶ್ನೆ ಪತ್ರಿಕೆಯಲ್ಲಿ ನಿಮ್ಮ ನೋಂದಣಿ ಸಂಖ್ಯೆಯನ್ನು ನಿಗದಿತ ಚೌಕಟ್ಟಿನಲ್ಲಿ ಬರೆಯಿರಿ.

Write your Register Number in the given box in your question paper.

ii) ಪ್ರಶ್ನೆ ಪತ್ರಿಕೆಯಲ್ಲಿ ಕೊಟ್ಟಿರುವ ಕರಡು ಪ್ರತಿಯನ್ನು ತಿದ್ದುಪಡಿ ಮಾಡಿದ ನಂತರ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆಯನ್ನು ಹಿಂತಿರುಗಿಸಿ.

Return the answer sheet and corrected proof of the question paper.

iii) ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ.

Answer *all* the questions.

1. ಕರಡು ತಿದ್ದುವ ಹತ್ತು ಚಿಹ್ನೆಗಳನ್ನು ಅವುಗಳ ಅರ್ಥದೊಂದಿಗೆ ವಿವರಿಸಿ.

   Write and explain ten proof-reading marks with their meanings. 10

2. ಪುಟ ಸಂಖ್ಯೆ 2 ರಲ್ಲಿ ಕೊಟ್ಟಿರುವ ಕನ್ನಡ ಭಾಷೆಯ ಕರಡು ಪ್ರತಿಯಲ್ಲಿ ಸರಿಯಾದ ಚಿಹ್ನೆಗಳನ್ನು ಉಪಯೋಗಿಸಿ ತಿದ್ದಿ.

   Correct the draft of Kannada matters given on Page 2 by using appropriate proof-reading marks. 30

[ Turn over

# ಅಜ್ಜನ ತೋಟದಲಿ ಒಂದು ದಿನ

ಮಲೆನಾಡ ತಪ್ಪಲಿನಲ್ಲಿರುವ ಒಂದು ಊರು ಕಣಬೂರು. ಅಲ್ಲೊಂದು ಹಿರಿಯ ಪ್ರಾಥಮಿಕ ಶಾಲೆ. ಆ ಶಾಲೆಯ ಮಕ್ಕಳು ಕಿಶೋರನ ಅಜ್ಜನ ತೋಟಕ್ಕೆ ಗುರುಗಳೊಂದಿಗೆ ಹೊರ ಸಂಚಾರ ಹೊರಟರು. ಕಿಶೋ ರನ ಅಜ್ಜನ ಮನೆ ಬೆಟ್ಟದ ತಪ್ಪಲಿನಲ್ಲಿದೆ. ಮನೆಯ ಹಿಂದಿನ ಗುಡ್ಡದಲ್ಲಿ ಗೇರು ಮರಗಳಿವೆ ಅಡಿಕೆ ತೋಟ ದಾಟಿ ಮುಂದೆ ಹೋದರೆ ಭತ್ತದ ಗದ್ದೆಗಳಿವೆ. ಮಕ್ಕಳೆಲ್ಲರೂ ಗದ್ದೆಯ ಹತ್ತಿರ ಬಂದು ತಲುಪಿದರು.

"ಇದು ಯಾರ ಬೆಳೆ ಎಂದು ಪೀಟರ್ ಪ್ರಶ್ನಿಸಿದೆ. "ಇದು ಭತ್ತದ ಬೆಳೆ" ಎಂದರು ಗುರುಗಳು. "ಓ ಇದೇನಾ! ಭತ್ತದ ಪೈರು?" ತೆನೆಗಳನ್ನು ಕೈಯಿಂದ ಮುಟ್ಟಿ ಪ್ರಶ್ನಿಸಿದ ಪೀಟರ್. ಒಂದು ಭತ್ತದ ತೆನೆಯನ್ನು ಕಿತ್ತುಕೊಟ್ಟು ತಗೋ ಇದನ್ನು ಬಿಡಿಸಿನೋಡು" ಎಂದರು ಗುರುಗಳು. ಶೀಲಾ ತಾನು ಒಂದು ತೆನೆ ಕೀಳಲು ಬಾಗಿದಾಗ ಒಂದು ಕಪ್ಪೆ ಚಂ ಗನೆ ಕುಪ್ಪಳಿಸಿತು. ಸರಸರ ಒಂದು ಹಾವು ಹತ್ತಿರ ದಲ್ಲೆ ಸರಿದು ಹೋಯಿತು. ಮಕ್ಕಳು ಭಯದಿಂದ ಹಿಂದೆ ನೆಗೆದರು. "ಹೆದರಬೇಡಿ ಅವು ನಮಗೆ ಏನು ಮಾಡುವುದಿಲ್ಲ ಹಾವು, ಕಪೆ, ಕೀಟ, ಹಕ್ಕಿ, ಮೊಲ, ಹಂದಿ, ಮುಂಗುಸಿ ಮುಂತಾದ ಪ್ರಾಣಿಗಳು ಸಾಮಾನವಾಗಿ ತೋಟದ ಸುತ್ತಮುತ್ತು ಇರುತ್ತವೆ" ಎಂದರು ಗುರುಗಳು.

ಮಕ್ಕಳು ಮಾತನಾಡುತ ಗದ್ದೆಯ ಬದುವಿನಲ್ಲಿ ನಡೆದು ರೋಡು ದಾಟಿ ಅಡಿಕೆ ತೋಟಕ್ಕೆ ಬಂದರು. ತೋಟದ ನಡುವೆ ಬಿದ್ದಿದ್ದ ಒಂದು ಹಣ್ಣನ್ನು ಹೆಕ್ಕಿದ ಮೇರೆ "ಓ! ಇಲ್ಲಿ ನೋಡಿ ಸೌತೆ ಕಾಯಿ! ಎಂದಳು. ಅಲ್ಲಲ್ಲ! ಅದು ಹೀರೇಕಾಯಿ" ಎಂದನು ರಫಿಕ್. "ಎರಡೂ ಅಲ್ಲ. ಅದು ಕೊಕೊ ಹಣ್ಣು. ಇದನ್ನು ಚಾಕಲೇಟು ತಯಾರಿಸಲು ಬಳಸುತ್ತಾರೆ. ಯಾವುದೊ ಪ್ರಾಣಿ ಅದನ್ನು ಕಿತ್ತು ಹಾಕಿದೆ. ಬಹುಶ: ಅಳಿಲೇ ಇರಬೇಕು' ಎಂದರು ಗುರುಗಳು.

ಅಷ್ಟರಲ್ಲಿ ಅಜ್ಜ ತೋಟದಲ್ಲಿ ಏನೋ ಮಾಡುತ್ತಿರುವುದನ್ನು ಕಂಡ ಮಕ್ಕಳು ಅಲ್ಲಿಗೆ ಓಡಿದರು. "ನಿಧಾ ನವಾಗಿ ಬನ್ನಿ. ಮುಳ್ಳುಗಳು ಇರಬಹುದು" ಎಂದು ಎಚ್ಚರಿಸಿದರು ಅಜ್ಜ. "ಇದೇನು ಇಷ್ಟೊಂದು ಗುಂಡಿ ತೋಡಿದ್ದೀರಿ?" ಎಂದು ಮಹೇಶ ಪ್ರಶ್ನಿಸಿದನು. "ನೀವೆಲ್ಲಾ ನಿಮ್ಮ ಕೈಯಾರೆ ಒಂದೊಂದು ಹಣ್ಣಿನ ಗಿಡ ಇದರಲ್ಲಿ ನೆಡಬೇಕು" ಎಂದು ಅಜ್ಜ ಉತ್ತರಿಸಿದರು. "ಬೇಡಪ್ಪ ನಮ್ಮ ಕೈ ಕೊಳೆಯಾಗುತ್ತದೆ. ನನ್ನ ಅಮ್ಮ ಬೈಯುತ್ತಾಳೆ" ಎಂದಳು ಅಶ್ವಿನಿ. "ಚೊಕ್ಕದ ಚಿಕ್ಕಮ್ಮ ಬಾರೆ" ಎಂದು ತಮಾಷೆ ಮಾಡಿದ ಮಹಮ್ಮದ್, "ಕೈ ಕೆಸರಾದರೆ ಬಾಯಿ ಮೊಸರು" ಎಂದು ಹೇಳುತ್ತಾ ಒಂದು ಗಿ ಡ ತೆಗೆದುಕೊಂಡು ನೆಡಲು ಆರಂಭಿಸಿದನು. ಅಂತೆಯೇ ಎಲ್ಲ ಮ ಕ್ಕಳು ಒಂದೊಂದು ಗಿಡ ನೆಟ್ಟರು ಕೈತೊಳೆದು ಅಜ್ಜ ಕೊಟ್ಟ ಹಣ್ಣನ್ನು ತಿಂದು ತೋಟ ದಲ್ಲೆಲ್ಲಾ ಸುತ್ತಾಡಿದರು. ತೋಟದ'ಲ್ಲಿದ್ದ ಅಡಿಕೆ, ತೆಂಗು, ಕಾಳು ಮೆಣಸು, ಕಾಫಿ, ಏಲಕ್ಕಿ ಮೊದಲಾದ ಗಿಡಗಳನ್ನು ನೋಡಿದರು.